ಓಎಸ್ ನಂಬರಃ 116/2001
ಪಿಡಬ್ಲೂ-2

ದಿಃ 18-11-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.
**ಪಾಟೀ ಸವಾಲು ಪ್ರತಿವಾದಿ 7, 12 ಹಾಗೂ 13 ಪರ ಶ್ರೀ. ಜಿ.ಟಿ.ಬಿ. ವಕೀಲರಿಂದಃ**

ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ಪ್ರತಿವಾದಿ 7, 12 ಹಾಗೂ 13 ರವರು ಕೆರೂರು ಗ್ರಾಮದವರು ಅಂದರೆ ಸರಿ. ಅವರುಗಳನ್ನು ನಾನು ಎಂದೂ ಭೇಟಿಯಾಗಿರುವುದಿಲ್ಲ. ಅವರುಗಳ ಬಳಿ ದಾವಾ ಸ್ವತ್ತುಗಳ ಬಗ್ಗೆ ನಾನು ಎಂದೂ ಚೌಕಾಸಿ ಮಾಡಿರುವುದಿಲ್ಲ. ಸರ್ವೆ ನಂ. 131/2, 132 ಸ್ವತ್ತುಗಳ ಚೆಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂ. 132 ಹಾಲಿ ಪೊಡು ಆಗಿರುತ್ತದೆ ಅಂದರೆ ನನಗೆ ತಿಳಿದಿಲ್ಲ. ಸದರಿ ಎರಡೂ ಸ್ವತ್ತುಗಳು ಮೂಲತಃ ಮೂಲ 1 ನೇ ಪ್ರತಿವಾದಿಗೆ ಸೇರಿದ್ದು ಅಂದರೆ ಸರಿ. ಆತ ಸರ್ವೆ ನಂ. 132 ರಲ್ಲಿ ತನ್ನಪಾಲಿನ 1/3 ಹಿಸ್ಸೆಯನ್ನು ತನ್ನ ಕುಟುಂಬದ ಅವಶ್ಯಕತೆಗಳಿಗಾಗಿ ದಿಃ 02/07/1979 ರಂದು ಪ್ರತಿವಾದಿ 12 ರವರ ತಂದೆ ಹಾಗೂ ಪ್ರತಿವಾದಿ 13 ರವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ತಿಳಿದಿಲ್ಲ. ಅದರಂತೆ ಅವರ ಹೆಸರಿಗೆ ಡೈರಿ ದಾಖಲು ಆಗಿರುತ್ತದೆ ಅಂದರೆ ನನಗೆ ತಿಳಿದಿಲ್ಲ. ಸದರಿ ಸ್ವತ್ತುಗಳ ಪ್ರತಿವಾದಿ 12 ಹಾಗೂ 13 ರವರಿಗೆ ಹೇಗೆ ಹೊಗಿರುತ್ತದೆ ಎಂದು ನಾನೂ ಎಂದೂ ಅವರಲ್ಲಿ ಚರ್ಚಿಸಿಲ್ಲ.ಅವರ ಹೆಸರಿಗೆ ಆದ ಕ್ರಯ ಪತ್ರ ಹಾಗೂ ಡೈರಿಯನ್ನು ನಾನು ಈವರೆಗೆ ಎಲ್ಲಿಯೂ ಪ್ರಶ್ನಿಸಿಲ್ಲ ಅಂದರೆ ಸಾಕ್ಷಿ ಸದರಿ ದಾಖಲೆಗಳ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತುಗಳಲ್ಲಿ ಹಾಲಿ ಯಾರೂ ಸ್ವಾಧೀನದಲ್ಲಿ ಇರುತ್ತಾರೆ ಎಂಬ ಬಗ್ಗೆ ನಾನು ವಿಚಾರ ಮಾಡಿಲ್ಲ.

ಪ್ರತಿವಾದಿ 12 ರವರ ತಂದೆಯ ಮರಣದ ಸಮಯದಲ್ಲಿ ಸರ್ವೆ ನಂ. 132 ರ ಪಹಣಿ ಮೂಲ ಪ್ರತಿವಾದಿ 2 ರವರ ಹೆಸರಿಗೆ ಇತ್ತು ಅಂದರೆ ನನಗೆ ತಿಳಿದಿಲ್ಲ. ಕ್ರಯ ಆದಾಗಿನಿಂದಲೂ ಸದರಿ ಸರ್ವೆ ನಂ. 131/2 ಹಾಗೂ ಸರ್ವೆ ನಂ. 132 ಪ್ರತಿವಾದಿ 12 ಹಾಗೂ 13 ರವರ ಸ್ವಾಧೀನದಲ್ಲಿ ಇರುತ್ತದೆ ಅಂದರೆ ನನಗೆ ತಿಳಿದಿಲ್ಲ. ಪ್ರತಿವಾದಿ 7, 12 ಹಾಗೂ 13 ರವರು ಈ ದಾವೆಯಲ್ಲಿ ಏನು ದಾಖಲೆ ಹಾಜರು ಪಡಿಸಿರುತ್ತಾರೆಂದು ನಾನು ನೋಡಿ ತಿಳಿದುಕೊಂಡಿಲ್ಲ. ಪ್ರತಿವಾದಿ 13 ರವರು ಸರ್ವೆ ನಂ. 132 ರ ತಮ್ಮ ಹಿಸ್ಸೆಯಲ್ಲಿ ಮನೆನಿರ್ಮಿಸಿ ಕುಟುಂಬ ಸಮೇತ ವಾಸ ಇರುತ್ತಾರೆಂದರೆ ನನಗೆ ತಿಳಿದಿಲ್ಲ. ಅದರಂತೆ ಆತ ತನ್ನ ಹಿಸ್ಸೆಯ ಜಮೀನಿನಲ್ಲಿ ಒಂದು ಕೊಳವೆ ಬಾವಿ ಹಾಗೂ ತೆರೆದ ಬಾವಿಯನ್ನು ತೆಗೆಸಿರುತ್ತಾರೆಂದರೆ ನನಗೆ ತಿಳಿದಿಲ್ಲ. ಅದಕ್ಕೆ ಪಂಪು ಸೆಟ್ಟುಗಳನ್ನು ಅಳವಡಿಸಿ ಪ್ರತಿವಾದಿ 13 ರವರು ತಮ್ಮ ಹೆಸರನಲ್ಲ ವಿದ್ಯುತ ಸಂಪರ್ಕ

ಪಡೆದಿರುತ್ತಾರೆಂದರೆ ನನಗೆ ತಿಳಿದಿಲ್ಲ. ಸದರಿ ಜಮೀನಿಗೆ ಪೈಪ ಲೈನ ಅಳವಡಿಸಿರುತ್ತಾರೆಂದರೆ ನನಗೆ ತಿಳಿದಿಲ್ಲ. ಆತ ತನ್ನ ಜಮೀನಿನಲ್ಲಿ ಕಬ್ಬು ಬೆಳೆದು ಪ್ರತಿ ವರ್ಷ ತನ್ನ ಹೆಸರಿನಲ್ಲಿ ಡಿ.ಕೆ.ಎಸ್.ಎಸ್. ಸಕ್ಕರೆ ಕಾರ್ಖಾನೆಗೆ ಕಳುಹಿಸುತ್ತಾರೆಂದರೆ ನನಗೆ ತಿಳಿದಿಲ್ಲ. ಸರ್ವೆ ನಂ. 132, 131/2 ರಲ್ಲಿ ನಾನು ಎಂದೂ ಖುದ್ದು ಸ್ವಾಧೀನದಲ್ಲಿ ಇಲ್ಲ ಹಾಗೂ ಸಾಗುವಳಿ ಮಾಡಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಪರವಾಗಿ ಮಾಡುತ್ತಿರುತ್ತಾರೆಂದು ನುಡಿಯುತ್ತಾರೆ. ಪ್ರತಿವಾದಿ 7, 12 ಹಾಗೂ 13 ನಮ್ಮ ಕುಟುಂಬದವರು ಅಲ್ಲ ಅಂದರೆ ಸರಿ. ಕ್ರಯದ ಆಧಾರದ ಮೇಲೆ ಅವರುಗಳು ಸದರಿ ಜಮೀನುಗಳ ಸ್ವಾಧೀನ ಪಡೆದು ಸಾಗುವಳಿ ಮಾಡುತ್ತಿರುತ್ತಾರೆಂದರೆ ಸಾಕ್ಷಿ ಯಾವುದೇ ಕ್ರಯ ನೀಡಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 13 ಸದರಿ ಜಮೀನುಗಳ ಅಭಿವೃದ್ಧಿ ಪಡಿಸಲು ಸುಮಾರು ರೂ. 14 ಲಕ್ಷ ವ್ಯಯ ಮಾಡಿರುತ್ತಾರೆಂದರೆ ನನಗೆ ತಿಳಿದಿಲ್ಲ.

ಪ್ರತಿವಾದಿ 12 ರವರ ತಂದೆ ಸಹ ಸರ್ವೆ ನಂ. 132 ರಲ್ಲಿ ಒಂದು ಮನೆ ನಿರ್ಮಿಸಿರುತ್ತಾರೆ, 2 ತೆರೆದ ಬಾವಿ ತೆಗೆಸಿ ಅದಕ್ಕೆ ಮೊಟರು ಅಳವಡಿಸಿ ತಮ್ಮ ಹೆಸರಿನಲ್ಲಿ ಅದಕ್ಕೆ ವಿಧ್ಯುತ ಸಂಪರ್ಕ ಪಡೆದು ಜಮೀನನ್ನು ಅಭಿವೃದ್ಧಿ ಪಡಿಸಿರುತ್ತಾರೆಂದರೆ ನನಗೆ ತಿಳಿದಿಲ್ಲ. ಹಾಲಿ ಸದರಿ ಮನೆಯಲ್ಲಿ ಪ್ರತಿವಾದಿ 12 ಕುಂಬದ ಸಮೇತ ವಾಸ ಇರುತ್ತಾರೆಂದರೆ ನನಗೆ ತಿಳಿದಿಲ್ಲ. ಪ್ರತಿ ವರ್ಷ ಜಮೀನಲ್ಲಿ ಆತ ಕಬ್ಬು ಬೆಳೆದು ಡಿ.ಕೆ.ಎಸ್.ಎಸ್. ಸಕ್ಕರೆ ಕಾರ್ಖಾನಗೆ ಕಳುಹಿಸುತ್ತಾರೆಂದರೆ ನನಗೆ ತಿಳಿದಿಲ್ಲ. ಸದರಿ ಅಭಿವೃದ್ಧಿ ಕೆಲಸ ಮಾಡಲು ಪ್ರತಿವಾದಿ 12 ಹಾಗೂ ಆತನತಂದೆ ಸುಮಾರು 10 ಲಕ್ಷ ಖರ್ಚು ಮಾಡಿರುತ್ತಾರೆಂದರೆ ನನಗೆ ತಿಳಿದಿಲ್ಲ.

ಪ್ರತಿವಾದಿ 12 ಹಾಗುಾ 13 ರವರು ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ನಾನು ಹೋಗಿ ನೊಡಿರುವುದಿಲ್ಲ, ಆ ಬಗ್ಗೆ ನನಗೆ ಖುದ್ದು ತಿಳಿದಿರುವುದಿಲ್ಲ. ಸದರಿ ಅಭಿವೃದ್ಧಿ ಕೆಲಸ ನಡೆಯುವ ಸಮಯದಲ್ಲಿ ನಾನು ಸ್ಥಳಕ್ಕೆ ಹೋಗಿ ಚೌಕಾಸಿ ಮಾಡಿಲ್ಲ ಹಾಗೂ ಯಾವುದೇ ತಕರಾರು ಮಾಡಿಲ್ಲ ಅಂದರೆ ಸರಿ.

ಸರ್ವೆ ನಂ. 131/2 ಮೂಲತಃ ಮೂಲ 1 ನೇ ಪ್ರತಿವಾದಿಗೆ ಸೇರಿದ್ದು ಅಂದರೆ ಸರಿ. ಆತ ಅದನ್ನು ತನ್ನ ಕುಟುಂಬದ ಅವಶ್ಯಕತೆಗಳಿಗಾಗಿ ದಿಃ 16/04/1980 ರಂದು ಪ್ರತಿವಾದಿ 12 ರವರ ತಂದೆಗೆಯವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ತಿಳಿದಿಲ್ಲ. ಅದರಂತೆ ಅವರ ಹೆಸರಿಗೆ ಡೈರಿ ದಾಖಲು ಆಗಿರುತ್ತದೆ ಅಂದರೆ ನನಗೆ ತಿಳಿದಿಲ್ಲ. ಸದರಿ ಸ್ವತ್ತುನಲ್ಲಿ ಪ್ರತಿವಾದಿ 12 ಹಾಗೂ ಈ ಹಿಂದೆ ಆತನ ತಂದೆ ಸ್ವಾಧೀನದಲ್ಲಿ ಇದ್ದರು ಅಂದರೆ ನನಗೆ ತಿಳಿದಿಲ್ಲ. ಪ್ರತಿವಾದಿ 12 ರವರ ತಂದೆ ಮರಣ

ಹೊಂದುವ ಪೂರ್ವದಲ್ಲಿ ಸದರಿ ಜಮೀನನ್ನು ತಮ್ಮ ಮಗಳಾದ 7 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡಿರುತ್ತಾರೆಂದರೆ ನನಗೆ ತಿಳಿದಿಲ್ಲ. ಅದರಂತೆ ಸದರಿ ಜಮೀನಿನಲ್ಲಿ ಪ್ರತಿವಾದಿ 7 ರವರ ತಂದೆ ನಿರ್ಮಿಸಿದ ಮನೆಯಲ್ಲಿ ಆಕೆ ಕುಟುಂಬ ಸಮೇತ ವಾಸ ಇರುತ್ತಾರೆಂದರೆ ನನಗೆ ತಿಳಿದಿಲ್ಲ. ಅದರಂತೆ ಆಕೆ ಸದರಿ ಜಮೀನಿನಲ್ಲಿ ಕೊಳವೆ ಬಾವಿ ತೆಗೆಸಿ ಮೊಟಾರು ಅಳವಡಿಸಿರುತ್ತಾರೆಂದರೆ ನನಗೆ ತಿಳಿದಿಲ್ಲ. ಅದರಂತೆ ಆಕೆ ಪ್ರತಿ ವರ್ಷ ಜಮೀನಲ್ಲಿ ಆಕೆ ಕಬ್ಬು ಬೆಳೆದು ಡಿ.ಕೆ.ಎಸ್.ಎಸ್. ಸಕ್ಕರೆ ಕಾರ್ಖಾನಗೆ ಕಳುಹಿಸುತ್ತಾರೆಂದರೆ ನನಗೆ ತಿಳಿದಿಲ್ಲ. ಸದರಿ ಕೆಲಸಗಳಿಗೆ ಆಕೆ ಸುಮಾರು ರೂ. 10 ಲಕ್ಷ ಖರ್ಚು ಮಾಡಿರುತ್ತಾರೆಂದರೆ ನನಗೆ ತಿಳಿದಿಲ್ಲ. ನಾನು ಸದರಿ ಜಮೀನ ಬಳಿ ಖುದ್ದು ಹೋಗಿ ಈವರೆಗೆ ನೋಡಿಲ್ಲ. ಸದರಿ ಸ್ವತ್ತಿನ ಸಂಬಂದ ಆದ ಕ್ರಯ ಪತ್ರ ಹಾಗೂ ಡೈರಿಯನ್ನು ನಾನು ಈ ವರೆಗೆ ಎಲ್ಲಿಯೂ ಪ್ರಶ್ನಿಸಿಲ್ಲ ಅಂದರೆ ಸಾಕ್ಷಿ ಸದರಿ ಕ್ರಯದ ಸಂಗತಿ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳ ಸಂಬಂದ ಚೌಕಾಸಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ಎರಡೂ ಜಮೀನುಗಳು ಪ್ರತಿವಾದಿ 7, 12 ಹಾಗೂ 13 ರವರಿಗೆ ಸೇರಿದ್ದು ಅವರೇ ಅದರ ಸ್ವಾ ಧಿನದಲ್ಲಿ ಇರುತ್ತಾರೆ ಹಾಗೂ ಅವುಗಳ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ. ನಿಜ ಸಂಗತಿಗಳು ನನಗೆ ತಿಳಿದಿದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಅಂದರೆ ಸರಿಯಲ್ಲ. ಸದರಿ ಜಮೀನುಗಳ ಉತಾರೆಯನ್ನು ಈವರೆಗೆ ನಾನು ನೋಡಿಲ್ಲ. ಸದರಿ ಜಮೀನುಗಳಿಗೆ ಪ್ರತಿವಾದಿ 7, 12 ಹಾಗೂ 13 ರವರೇ ಕಂದಾಯ ಪಾವತಿಸಿರುತ್ತಾರೆಂದರೆ ಸರಿ.

<u>**ಮರು ವಿಚಾರಣೆಃ ಇಲ್ಲ.**</u>

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)</u>

ಓ.ಹೇ. ಕೇ. ಸ. ಇದೆ.

(ಟಿ.ಶ್ರೀಕಾಂತ)
ಪ್ರ.ಹಿ.ದಿ.ನ್ಯಾಯಾಧೀಶರು,ಚಿಕ್ಕೋಡಿ